ನೋಟ್ಸ್.

ಹಾಸನ ಡಿಸ್ಟ್ರಿಕ್ಟ್ ತಂಗಡಿ ಚಕ್ಕೆ ಜಮಾವಣಿ ವಿಚಾರದಲ್ಲಿ ಟೆಂಡರ್ ಕಳುಹಿಸತಕ್ಕ ಬಗ್ಗೆ 1907ನೆ ಜೂ. 13ನೆ ತಾರೀಖು ಮೈಸೂರು ಗೆಜೆಟ್ 11ನೆ ಭಾಗದ 281—287ನೆ ಪುಟ್‌ನಲ್ಲಿ ಪ್ರಕಟಿಸಿರುವ 1907ನೆ ಇಸವಿ ಜೂ. 9ನೆ ತಾರೀಖಿನ ಇಸ್ತಿಹಾರನ್ನು ಎಲ್ಲಾ ಜನಗಳು ನೋಡಬೇಕಾದ್ದು.

ಬಿ. ಐ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ್.

ತಾರೀಖು 10ನೆ ಜೂ. 1907.

ಸಮಸ್ತ ಜನಗಳಿಗೂ ತಿಳಿಸುವದೇನಂದರೆ — ಈ ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿ ಇರುವ (ಸ್ಟೇಟ್ ಫಾರೆಸ್ಟ್ಸ್ ಮತ್ತು ಪ್ರೈವೇಟ್ ಪರ್ಸನ್‌ಗಳ ವಿನಹ) ಹಿಡುವಳಿಯಲ್ಲಿಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1907ನೆ ಇಸವಿ ಜುಲೈ ಗುರ್ರೇ ಲಾಗಾಯತು 1908ನೆ ಇಸವಿ ಜೂ. 31ನೆ ತಾರೀಖು ವರಿಗೆ ಜಮಾಯಿಸಿ ತಗದು ಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕು ದಾರಿಯು ಈ ಕೆಳಗೆ ನಮೂದಾಗುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಆಯಾಯ ತಾಲ್ಲೂಕ್ ಅಮಲ್ದಾರ್‌ರಿಂದ ರೇಂಜರುಗಳಿಂದ ಹರಾಜು ಮಾಡಿಸುತ್ತೆ :—

ನಂಬರ್.	ತಾಲ್ಲೂಕ್ ಹೆಸರು.	ಹರಾಜು ತಾರೀಖು.	ಹರಾಜಾಗತಕ್ಕ ಸ್ಥಳ.
1	ಚಿಕ್ಕಮಗಳೂರು ...	15—7—07	ತಾಲ್ಲೂಕು ಕಛೇರೀಲಿ.
2	ಕಡೂರು ...	17—7—07	ಡಿಟೋ
3	ತರೀಕೆರೆ ...	19—7—07	ಡಿಟ್ಟೋ

ನೋಟ್—ಹರಾಜು ಅವಶ್ಯಕ ಕಂಡುಬಂದರೆ ಸಂಮತ್ತುವಾರ ಹರಾಜು ಮಾಡಿಸಲ್ಪಡುತ್ತದೆ.

2. ಹರಾಜು ಆಯಾಯ ತಾರೀಖಿನ ಮಧ್ಯಾಹ್ನದಲ್ಲಿ ಪ್ರಾರಂಭವಾಗುತ್ತೆ.

3. ಹರಾಜು ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

4. ಸವಾಲ್ ಮಾಡಲು ಇಷ್ಟವುಳ್ಳವರು ಖುದ್ದಾಗಿಯಾಗಲೀ ಅಥವಾ ಕ್ರಮಪ್ರಕಾರ ಮೊಖ್ತ್ಯಾರಿ ವಹಿಸಿದ ವಿಜಂಟರ ಮುಖಾಂತ್ರವಾಗಲಿ ಹಾಜರಾಗಿ ಸವಾಲ್ ಮಾಡತಕ್ಕದ್ದು.

5. ಹರಾಜು ಕೈದಾದ ಕೂಡಲೆ ಛಡ ಸವಾಲ್‌ದಾರನು ನಗದಾಗಿ ಹರಾಜು ಮೊಬಲಗು ಮತ್ತು ಇದಕ್ಕೆ ಲೋಕಲ್ ಸೆಸ್ ರೂ ಪಾಯಿಗೆ ಬಂದಾಣಿ ವೀರಿಗೆ ಸೇರಿಸಿ ಒಟ್ಟು ಹಣದಲ್ಲಿ ನಾಲ್ಕನೆ ಒಂದು ಭಾಗ ಮೊಬಲಗನ್ನು ಡಿಪಾಜಿಟ್ ಹಾಜರ್ಮಾಡಬೇಕು, ಹಾಗೆ ಕೊಡಲು ತಪ್ಪಿದರೆ ಈ ಸ್ವತಂತ್ರದ ಹಕ್ಕನ್ನು ಪುನಹ ಹರಾಜು ಮಾಡಿಸುತ್ತೆ.

6. ಮೇಲೆ ಹೇಳಿದಂತೆ ದುಸರಾ ಹರಾಜು ಮಾಡಿಸುವದರಲ್ಲಿ ಲುಕ್ಸಾನಿಗೆ ಅವ್ವಲ್ ಹರಾಜುದಾರ ಗುರಿಯಾಗತಕ್ಕದ್ದು. ಅವನಿಗೆ ಆ ದುಸರಾ ಹರಾಜಿನಲ್ಲಿ ಲಾಭ ಬಂದರೆ ಹಕ್ಕೇನು ಇರುವದಿಲ್ಲ. ನಷ್ಟ ಬಂದರೆ ಮೊದಲು ಹರಾಜಿನಲ್ಲಿ ಬಂದ ಸವಾಲ್ ಮೊಬಲಗಿಗೂ, ಎರಡನೆ ಹರಾಜಿನಲ್ಲಿ ಬಂದ ಮೊಬಲಗಿಗೂ, ಇರುವ ಕಮ್ಮಿ ಮೊಬಲಗು ಅವ್ವಲ್ ಹರಾಜುದಾರನಿಂದ ರೆವಿನ್ಯೂ ಬಾಕಿಯ್ಯಂತೆ ವಸೂಲ್ಮಾಡಲ್ಪಡುವದು.

7. ಛಡ ಸವಾಲ್‌ದಾರನು ಬಾಕಿ ೪ ಹಿಸ್ಸೆ ಹರಾಜು ಮೊಬಲಗನ್ನು ಮತ್ತು ಅದರ ಲೋಕಲ್ ಸೆಸ್ ಸಹಾ ಹರಾಜು ತಾರೀಖು ಲಾಗಾಯಿತು ಒಂದು ತಿಂಗಳಲ್ಲಿ ಪಾವತೀ ಮಾಡದೆ ತಪ್ಪಿದರೆ ಮೊದಲು ಇಟ್ಟ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಕೇರಿಸಲ್ಪಡುತ್ತೆ. ಅದಲ್ಲದೇ ಮುಂದೇ ಜಮಾಯಿಸಿಕೊಳ್ಳುವದಕ್ಕೆ ಇಜಾರ ಹಕ್ಕು ಸಹಾ ತಪ್ಪಿಹೋಗುತ್ತೆ. ಬಾಕೀ ಏನಾದರೂ ಮೊಬಲಗು ನಿಂತರೆ ರೆವಿನ್ಯೂ ಬಾಕೀಯಂತೆ ವಸೂಲ್ಮಾಡಲ್ಪಡುತ್ತೆ.

8. ಹರಾಜು ಮಂಜೂರಿಯನ್ನು ಹರಾಜುದಾರನಿಗೆ ತಿಳಿಸಿದ (3) ದಿವಸಗಳ ವಳಗಾಗಿ ಸರಿಯಾದ ಛಾಪಾ ಕಾಗದ್ದಲ್ಲಿ ೧೯೦೮ನೆ ಮಾರ್ಚಿ ತಾರೀಖಿನಲ್ಲಿ ಕಂಡ ಷರತ್‌ಗಳ ಮೇರೆ ನಡದುಕೊಳ್ಳಲು ಬದ್ಧನಾಗಿ ಇರುವದಕ್ಕೆ ಮುಚ್ಚಳಿಕೆ ಬರದು ರುಜು ಮಾಡಿಕೊಡಬೇಕು.

9. ಈ ಕೆಳಗೆ ನಮೂದಾಗುವ ಷರತ್ತುಗಳ ಮೇರೆ ಹರಾಜುದಾರನು ನಡದುಕೊಳ್ಳಬೇಕು.

(1) ಬಂದು ವರುಷಕ್ಕೆ ಬಳಪಟ್ಟು ಗಿಡಗಳನ್ನು ಕಡಿಯಕೂಡದು.

(2) ತೊಟ್ಟಿ ತಗೆದ ಕಡ್ಡಿಗಳು ಇಜಾರೆದಾರನದಾಗಿ ಇರತಕ್ಕದ್ದು.

(3) ಇಜಾರೆ ಮೇರೆ ಸಾಗಿಸಿಕ್ಕೊಂಡ ಚಕ್ಕೆ ಮೊತ್ತದ ತಪಶೀಲ್ ಲೆಖ್ಕ ಇಡಬೇಕು. ತಾಲ್ಲೂಕ್ ಅಮಲ್ದಾರ್ರು ಅಥವಾ ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರಿಂದ ನೇಮಿಸುವ ಇತರ ಆಫಿಸರು ಲೆಖ್ಕ ತನಿಖೇ ಮಾಡಲು ಬಂದಾಗ ಲೆಖ್ಕ ತೋರಿಸಬೇಕು.

(4) ಡೆಪ್ಯೂಟಿ ಕಮಿಷನರ್ ಸಾಹೇಬರವರು ವಿಧಿಸುವ ರೀತಿಯಂತೆ ಚಕ್ಕೆ ಸಾಗಿಸಿಕೊಳ್ಳತಕ್ಕ ಬಗ್ಗೆ ಪ್ಯಾಸ್ ಪಡಿಯಬೇಕು.

(5) 1908ನೆ ಇಸವಿ ಜೂ. ಆಖೈರು ವಳಗಾಗಿ ಕಡದು ಜಮಾಯಿಸಿಕೊಂಡಿರುವ ಚಕ್ಕೆಯನ್ನೆಲ್ಲಾ ಆಯಾಯ ತಾಲ್ಲೂಕಿನ ಸರಹದ್ದಿನ ಹೊರಕ್ಕೆ ಸಾಗಿಸಿಬಿಡಬೇಕು.

(6) ಮೇಲ್ಕಂಡ ಷರತ್ತುಗಳಲ್ಲಿ ಯಾವದಕ್ಕಾಗಲೀ ತಪ್ಪು ನಡದರೆ ಇಜಾರೆ ರದ್ದು ಮಾಡಲ್ಪಡುತ್ತೆ. ಅಲ್ಲದೇ ಸಾಗಿಸಬೇ ನಿಂತಿರುವ ಚಕ್ಕೆ ವಿಶಿಷ್ಟವೂ ಸರ್ಕಾರಕ್ಕೆ ಕೇರಿಸಲ್ಪಡುತ್ತೆ.

(7) ತಂಗಡಿ ಗಿಡಗಳನ್ನು ಚಕ್ಕೆಗೋಸ್ಕರ ಹೊರ್ತು ಗೊಬ್ಬರದ ಸೊಪ್ಪಿಗಾಗಿ ಆಗಲಿ, ಸಾದೇ ಬಗ್ಗಾಗಲೀ ಅಥವಾ ಇನ್ಯಾವದಕ್ಕಾಗಲೀ ಕಡಿಯಕೂಡದು.

ಬಿ. ಹಿರಾಸಿಂಗ್,
ಫಾರ್ ಡೆಪ್ಯೂಟಿ ಕಮ್ಮಿಷನರ್ ಕಡೂರು ಡಿಸ್ಟ್ರಿಕ್ಟ್.